# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 676 (815) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಐವನ್ ಡಿ'ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 23.07.2024 |
| ಉತ್ತರಿಸುವ ಸಚಿವರು | : | ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮಂಗಳೂರಿನಲ್ಲಿ ಎಂ.ಆರ್.ಪಿ.ಎಲ್ / ಓಎನ್.ಜಿ.ಸಿ. 4ನೇ ಹಂತದಲ್ಲಿ ಎಷ್ಟು ಎಕರೆ ಭೂಮಿಯನ್ನು ಯಾವಾಗ ರೈತರಿಂದ ಪಡೆದು ಕೊಳ್ಳಲಾಗಿದೆ ಈ ಎಲ್ಲಾ ಮಂದಿ ಪುನರ್ ವಸತಿ ಮತ್ತು ಪುನರ್ ವ್ಯವಸ್ಥೆಗೆ ಅರ್ಹರೇ; (ವಿವರ ನೀಡುವುದು) | ಎಂ.ಆರ್.ಪಿ.ಎಲ್. 4ನೇ ಹಂತದ ಯೋಜನೆಗಾಗಿ 1011-77.19 ಎಕರೆ ಜಮೀನನ್ನು ಭೂಸ್ವಾಧೀನಪಡಿಸಲು ಕೆ.ಐ.ಎ.ಡಿ.ಬಿ. ಕಾಯ್ದೆ ಕಲಂ. 28(1) ರಡಿ ದಿನಾಂಕ: 20-12-2016 ರಂತೆ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದ್ದು, ದಿನಾಂಕ: 15-12-2017, 20-01-2018, 25-11-2020 ರಂತೆ ಒಟ್ಟು 990-60.14 ಎಕರೆ ಜಮೀನಿಗೆ ಕಲಂ. 28(4) ರಡಿ ಅಂತಿಮ ಅಧಿಸೂಚನೆ ಹೊರಡಿಸಲಾಗಿರುತ್ತದೆ.<br><br>ಆರ್ & ಆರ್ ಸವಲತ್ತುಗಳನ್ನು ನೀಡಲು ಸರ್ಕಾರವು ಹೊರಡಿಸುವ ಆದೇಶದಲ್ಲಿ ತಿಳಿಸಲಾದ cut off ದಿನಾಂಕದಂದು ಭೂಸ್ವಾಧೀನವಾದ ಮನೆ, ಕಟ್ಟಡಗಳಲ್ಲಿ ವಾಸವಿದ್ದ ಬಗ್ಗೆ ಸರ್ಕಾರಿ ಆದೇಶದಲ್ಲಿ ತಿಳಿಸಲಾಗುವ ದಾಖಲೆಗಳನ್ನು ಹಾಜರುಪಡಿಸಿದ ನಿರ್ವಸಿತರಿಗೆ ಮಾತ್ರ ಆರ್ & ಆರ್ ಸವಲತ್ತುಗಳನ್ನು ನೀಡಬೇಕಾಗಿರುತ್ತದೆ. |
| ಆ) | ಭೂಮಿ ನೀಡಿದ ನಿರ್ವಸಿತರಿಗೆ ಉದ್ಯೋಗ ನೀಡಲು ಎಂ.ಆರ್.ಪಿ.ಎಲ್/ಓಎನ್.ಜಿ.ಸಿ. ಮತ್ತು ಸರ್ಕಾರದ ನಿಲುವೇನು; (ವಿವರ ನೀಡುವುದು) | ಜಿಲ್ಲಾಧಿಕಾರಿಗಳು, ಉಡುಪಿ ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 12-07-2024 ರಂದು ನಡೆದ ಆರ್ & ಆರ್ ಸಭೆಯ ತೀರ್ಮಾನದಂತೆ ನಿರ್ವಸಿತರಿಗೆ ನಿಯಮಾನುಸಾರ ಉದ್ಯೋಗ ಒದಗಿಸಲು ಕ್ರಮ ಕೈಗೊಳ್ಳಲಾಗುತ್ತದೆ. |
| ಇ) | ಓಎನ್.ಜಿ.ಸಿ./ಎಂ.ಆರ್.ಪಿ.ಎಲ್ ಕೈಗಾರಿಕೆ ಭೂಸ್ವಾಧೀನ ಮಾಡಿದ ಜಾಗದ ಬದಿಯ ಹತ್ತಿರದಲ್ಲಿಯೇ ಪುನರ್ ವಸತಿಯನ್ನು ಕಲ್ಪಿಸಬೇಕೆಂಬ ನಿಯಮವಿದ್ದರೂ ನೀಡಿರುವುದಿಲ್ಲವೆಂಬ ದೂರುಗಳಿರುವುದು ನಿಜವೇ; ಕಲ್ಪಿಸಿದ್ದಲ್ಲಿ ವಿವರ ನೀಡುವುದು; | ದಿನಾಂಕ: 12-07-2024 ರಂದು ಜಿಲ್ಲಾಧಿಕಾರಿಗಳು, ಉಡುಪಿ ಜಿಲ್ಲೆ ರವರ ಅಧ್ಯಕ್ಷತೆಯಲ್ಲಿ ನಡೆದ ಆರ್ & ಆರ್ ಸಭೆಯಲ್ಲಿ ಚರ್ಚಿಸಿದ್ದು, ನಿವೇಶನ/ನಗದು ಪರಿಹಾರ ಅಪೇಕ್ಷಿತ ಪಟ್ಟಿ ಸಿದ್ಧಪಡಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಲಾಗಿರುತ್ತದೆ. ಈ ಬಗ್ಗೆ ಮುಂದಿನ ಆರ್ & ಆರ್ ಸಭೆಯಲ್ಲಿ ಚರ್ಚಿಸಬೇಕಾಗಿರುತ್ತದೆ. |

| | | |
|---|---|---|
| ಈ) | ಭೂಸ್ವಾಧೀನ ಮಾಡಿದ ಜಮೀನಿನಲ್ಲಿ ಇದ್ದ ಕೃಷಿ ಭೂಮಿ, ಮರಗಳು ಹಾಗೂ ಮನೆಗಳಿಗೆ ಪರಿಹಾರಗಳನ್ನು ಯಾವ ಮಾನದಂಡದಲ್ಲಿ ನೀಡಲಾಗುತ್ತಿದೆ? (ವಿವರ ನೀಡುವುದು) | ಭೂಸ್ವಾಧೀನ ಮಾಡಿದ ಜಮೀನಿನಲ್ಲಿ ಇದ್ದ ಮರಗಳು ಹಾಗೂ ಮನೆಗಳಿಗೆ ಪರಿಹಾರಗಳನ್ನು ತೋಟಗಾರಿಕಾ ಇಲಾಖೆಯವರು, ಅರಣ್ಯ ಇಲಾಖೆಯವರು ಮತ್ತು ಕಾರ್ಯಪಾಲಕ ಅಭಿಯಂತರರು, ಕೆ.ಐ.ಎ.ಡಿ.ಬಿ. ರವರು ನೀಡುವ ಮೌಲ್ಯ ಮಾಪನ ವರದಿಯಂತೆ ಪರಿಹಾರಧನವನ್ನು ನೀಡಲಾಗುತ್ತದೆ. |

**ಸಂಖ್ಯೆ: ಸಿಐ 280 ಐಎಪಿ 2024**

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು